# ಪತ್ರಿಕಾ ಪ್ರಕಟಣೆ

**ವಾಣಿಜ್ಯ ತೆರಿಗೆಗಳ ಇಲಾಖೆಯ ಜಾರಿ ವಿಭಾಗದಿಂದ ತುಮಕೂರಿನಲ್ಲಿ ರೂ.12 ಕೋಟಿ ಮೌಲ್ಯದ ಅಡಿಕೆಯ ಜಪ್ತಿ**

ಕರ್ನಾಟಕದ ವಾಣಿಜ್ಯ ತೆರಿಗೆಗಳ ಇಲಾಖೆಯು ದಿನಾಂಕ: 19.12.2018 ರಂದು ತುಮಕೂರಿನಲ್ಲಿ ನಡೆಸಿದ ಒಂದು ಅನಿರೀಕ್ಷಿತ ದಾಳಿಯಲ್ಲಿ, ಇಲಾಖೆಯ ದಕ್ಷಿಣ ವಲಯ ಜಾರಿ ವಿಭಾಗದ ಅಧಿಕಾರಿಗಳು ಒಂದು ಗೋದಾಮಿನಲ್ಲಿ ಭಾರೀ ಪ್ರಮಾಣದ ದಾಖಲಾತಿಗಳಿಲ್ಲದ ಅಡಿಕೆಯ ದಾಸ್ತಾನಿರುವುದನ್ನು ಪತ್ತೆ ಹಚ್ಚಿರುತ್ತಾರೆ. ಸೂಕ್ತ ದಾಖಲಾತಿಗಳಿಲ್ಲದೇ ಸರಕನ್ನು ದಾಸ್ತಾನು ಮಾಡಿದ ಕಾನೂನು ಉಲ್ಲಂಘನೆಗಾಗಿ ಅಧಿಕಾರಿಗಳು ರೂ.72 ಲಕ್ಷದಷ್ಟು ತೆರಿಗೆ ಹಾಗೂ ದಂಡವನ್ನು ಸಂಗ್ರಹಿಸಿ ಗೋದಾಮನ್ನು ಜಪ್ತಿ ಮಾಡಿರುತ್ತಾರೆ.

ಖಚಿತ ಮಾಹಿತಿಯ ಆಧಾರದ ಮೇಲೆ, ಶ್ರೀ ನಿತೇಶ್ ಪಾಟಿಲ್, ಭಾ.ಆ.ಸೇ., ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ಇವರ ನೇತೃತ್ವದ ಅಧಿಕಾರಿಗಳ ತಂಡ ತುಮಕೂರಿನ ಅಂತರಸನಹಳ್ಳಿಯಲ್ಲಿರುವ ಗೋದಾಮುಗಳ ಮೇಲೆ ದಾಳಿ ಮಾಡಿದ್ದು, 2 ಗೋದಾಮುಗಳಲ್ಲಿ ಸುಮಾರು ರೂ.12 ಕೋಟಿ ಮೌಲ್ಯದ ಅಡಿಕೆಯನ್ನು ಯಾವುದೇ ದಾಖಲಾತಿಗಳಿಲ್ಲದೇ ದಾಸ್ತಾನು ಮಾಡಿರುವುದನ್ನು ಪತ್ತೆ ಹಚ್ಚಿರುತ್ತಾರೆ. ಈ ಗೋದಾಮುಗಳ ಮೇಲೆ ಯಾವುದೇ ನಾಮಫಲಕಗಳನ್ನು ಅಳವಡಿಸಿರುವುದಿಲ್ಲ ಹಾಗೂ ಪ್ರಾರಂಭದಲ್ಲಿ ಅಲ್ಲಿನ ಕೆಲಸಗಾರರು ಹಾಗೂ ಮಾಲೀಕರು ಇದು ಒಂದು ರೈಸ್ ಮಿಲ್ ಎಂದೂ, ಇಲ್ಲಿ ಭತ್ತವನ್ನು ದಾಸ್ತಾನು ಮಾಡಲಾಗಿದೆಯೆಂದೂ ತಿಳಿಸುತ್ತಾ, ಅಧಿಕಾರಿಗಳು ಒಳ ಪ್ರವೇಶಿಸುವುದನ್ನು ತಡೆದಿರುತ್ತಾರೆ. ಆದರೆ, ಅಧಿಕಾರಿಗಳು ಅಧಿಕೃತ ಅಧಿಕಾರ ಪತ್ರಗಳೊಂದಿಗೆ ಗೋದಾಮುಗಳನ್ನು ಪ್ರವೇಶಿಸಿ ಪರಿಶೀಲಿಸಿದ್ದು, ಬೃಹತ್ ಪ್ರಮಾಣದ ಅಡಿಕೆಯ ದಾಸ್ತಾನನ್ನು ನೋಡಿ ಅಧಿಕಾರಿಗಳು ಆಶ್ಚರ್ಯಗೊಂಡರು. ಅಧಿಕಾರಿಗಳು ಗೋದಾಮನ್ನು ಜಪ್ತಿ ಮಾಡಿದ್ದು, ತನಿಖೆಯು ಪ್ರಗತಿಯಲ್ಲಿದೆ.

ಈ ಪ್ರಕರಣದಲ್ಲಿ ಒಟ್ಟು ಸುಮಾರು ರೂ.1.2 ಕೋಟಿಗಳಷ್ಟು ತೆರಿಗೆ ಹಾಗೂ ದಂಡವನ್ನು ಒಳಗೊಂಡಿದ್ದು, ಈಗಾಗಲೇ ಅಧಿಕಾರಿಗಳು ರೂ.72 ಲಕ್ಷಗಳಷ್ಟು ತೆರಿಗೆ ಹಾಗೂ ದಂಡವನ್ನು ವಸೂಲು ಮಾಡಿದ್ದು, ಮುಂದಿನ ತನಿಖೆ ಪ್ರಗತಿಯಲ್ಲಿದೆ.

ಕರ್ನಾಟಕದ ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ ಮತ್ತು ಇತರೇ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಡಿಕೆಯನ್ನು ಬೆಳೆಯುವುದರಿಂದ, ವರ್ತಕರು ಈ ಸರಕುಗಳನ್ನು ಖರೀದಿಸಿ, ಸಾಗಾಣೆ ಮಾಡಿ ಯಾವುದೇ ದಾಖಲಾತಿಗಳಿಲ್ಲದೇ ದಾಸ್ತಾನು ಮಾಡುತ್ತಿದ್ದು, ಅವುಗಳನ್ನು ದೇಶದ ವಿವಿಧ ಭಾಗಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಯಾವುದೇ ದಾಖಲಾತಿಗಳಿಲ್ಲದ ವಹಿವಾಟುಗಳು ಕಂಡುಬಂದಲ್ಲಿ, ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಹಾಗೂ ತೆರಿಗೆ ವಂಚನೆಯ ಚಟುವಟಿಕೆಗಳಲ್ಲಿ ತೊಡಗಿರುವ ವರ್ತಕರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಈ ರೀತಿ ಸೂಕ್ತ ದಾಖಲಾತಿಗಳಿಲ್ಲದೇ ಸರಕು ಸಾಗಾಣಿಕೆಯಲ್ಲಿ ತೊಡಗಿರುವ ಹಾಗೂ ಸೂಕ್ತ ನೊಂದಣಿ ಹಾಗೂ ದಾಖಲಾತಿಗಳಿಲ್ಲದೇ ಸರಕುಗಳನ್ನು ದಾಸ್ತಾನು ಮಾಡಿ ತೆರಿಗೆ ವಂಚನೆ ಹಾಗೂ ತೆರಿಗೆ ತಪ್ಪಿಸುವಿಕೆಯ ಪ್ರಕರಣಗಳು ಕಂಡುಬಂದಲ್ಲಿ, ಸಾರ್ವಜನಿಕರು ಅಂತಹ ಪ್ರಕರಣಗಳನ್ನು ಇಲಾಖೆಯ ಜಾರಿ ವಿಭಾಗದ ಅಧಿಕಾರಿಗಳ ಗಮನಕ್ಕೆ ತಂದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.

(ಎಂ.ಎಸ್.ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು